ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/09/ಇಸಿಎಸ್(2)/2023

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು -560001
email:dte.commissioner@gmail.com
ದೂರವಾಣಿ ಸಂಖ್ಯೆ::080-2220777

ದಿನಾಂಕ: 01-02-2024

**ಜ್ಞಾಪನ**

ವಿಷಯ: ಡಿಸೆಂಬರ್ 2023ರ ಡಿಪ್ಲೊಮಾ ಸೆಮಿಸ್ಟರ್ ಪರೀಕ್ಷೆಯ ಫಲಿತಾಂಶದ ಕುರಿತು

ಉಲ್ಲೇಖ: ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ 05 ಇಎಪಿ 2023 ದಿನಾಂಕ:25/01/2024

************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ ಸುತ್ತೋಲೆಯಲ್ಲಿ ತಾಂತ್ರಿಕ ಪರೀಕ್ಷಾ ಮಂಡಳಿಯ ಡಿಸೆಂಬರ್ 2023ರ ಸೆಮಿಸ್ಟರ್ ಪರೀಕ್ಷೆಯ ಫಲಿತಾಂಶವನ್ನು ದಿನಾಂಕ: 29/01/2024 ರಂದು ಪ್ರಕಟಿಸಲಾಗಿದೆ.

ಡಿಸೆಂಬರ್ 2023ರ ಸೆಮಿಸ್ಟರ್ ಪರೀಕ್ಷೆಯ ಫಲಿತಾಂಶವನ್ನು ಸಂಬಂಧಪಟ್ಟ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳು ಮತ್ತು ವಿಭಾಗಾಧಿಕಾರಿಗಳು ಕೂಲಂಕಶವಾಗಿ ಪರಿಶೀಲಿಸುವಂತೆ ತಿಳಿಸಲಾಗಿದೆ. ಫಲಿತಾಂಶದಲ್ಲಿ ಯಾವುದೇ ನ್ಯೂನತೆಗಳು/ಲೋಪದೋಷಗಳು/ದೂರುಗಳು ಇದ್ದಲ್ಲಿ ಅಥವಾ ಯಾವುದೇ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶ ಪ್ರಕಟಗೊಳ್ಳದಿದ್ದಲ್ಲಿ (WITHHELD) ಸದರಿ ವಿವರಗಳನ್ನು ಲಿಖಿತವಾಗಿ ಸೂಕ್ತ ದಾಖಲೆಗಳೊಂದಿಗೆ/ಮಾಹಿತಿಯೊಂದಿಗೆ ದಿನಾಂಕ: 12/02/2024 ರೊಳಗೆ ಈ ಕಛೇರಿಗೆ ಸಲ್ಲಿಸುವಂತೆ ತಿಳಿಸಲಾಗಿದೆ. ಸದರಿ ದಿನಾಂಕದ ನಂತರ ಫಲಿತಾಂಶದಲ್ಲಿನ ನ್ಯೂನತೆಗಳು/ಲೋಪದೋಷಗಳು/ದೂರುಗಳು ಬಗ್ಗೆ ಹಾಗೂ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶ ಪ್ರಕಟಗೊಳ್ಳದಿರುವ (WITHHELD) ಬಗ್ಗೆ ಯಾವುದೇ ಮನವಿಗಳನ್ನು ಸ್ವೀಕರಿಸಲಾಗುವುದಿಲ್ಲ ಮತ್ತು ಮುಂದಿನ ಆಗುಹೋಗುಗಳಿಗೆ ಸಂಸ್ಥೆಗಳ ಪ್ರಾಚಾರ್ಯರುಗಳೇ ನೇರ ಜವಬ್ದಾರರಾಗಿರುತ್ತಾರೆಂದು ತಿಳಿಸಲಾಗಿದೆ.

ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳಿ
ಬೆಂಗಳೂರು

ಇವರಿಗೆ,

1. ರಾಜ್ಯದ ಎಲ್ಲಾ ಪಾಲಿಟೆಕ್ನಿಕ್ ಪ್ರಾಚಾರ್ಯರುಗಳಿಗೆ - ಮುಂದಿನ ಕ್ರಮಕ್ಕಾಗಿ
2. ಇ-ಆಡಳಿತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು